ತಡಕಾಡುತ್ತಿದ್ದ ಬಳ್ಳಿ ಕಾಲಿಗೆ ಎಡವಿದಂತಾಯಿತು.

'ಕಿರಣ, ನೆನ್ನೆ ದಿನ ಏನು ನಡಿತೂಂತ ಹೇಳ್ತೀಯಾ?'

ಮೇನಕಾಳೇನಾದರೂ ತನ್ನಿಂದ ವಿಷಯ ಮುಚ್ಚಿಟ್ಟಿರಬಹುದೇ ಅನ್ನುವ ಅನುಮಾನದಿಂದ ಕೇಳಿದ. ಕಿರಣ, ಮೇನಕಾ ತನಗಾಗಿ ಸಿದ್ಧಗೊಳಿಸಿದ ಪಾರ್ಟಿಯ ವಿಷಯವನ್ನುಳಿದು ಉಳಿದಂತೆಲ್ಲಾ ಮೇನಕಾ ಅಧಿಕಾರಿಗೆ ಹೇಳಿದ ಎಲ್ಲಾ ವಿಷಯವನ್ನು ತಿಳಿಸಿದ. ಮೇನಕಾಳ ಹೇಳಿಕೆಗೂ ಕಿರಣನ ಹೇಳಿಕೆಗೂ ಹೋಲಿಕೆಯಿತ್ತು.

ಪಿಸಿ ಸಾರಂಗ ಹೇಳಿದ ವ್ಯಕ್ತಿ, ಅಂದ್ರೆ ಪಾಂಬುವಿನ ಕಾರಿನಲ್ಲಿ ಕಂಡ ವ್ಯಕ್ತಿಗೂ ಕಿರಣನ ಸಾಮ್ಯತೆ? ಆ ವ್ಯಕ್ತಿ ಯಾರು? ಆತ ಕಿರಣನನ್ನು ಹೋಲುವುದಾದರೆ ಅವನು ಕಿರಣನಿಗೆ ಸಂಬಂಧಿಯೆ? ಅಧಿಕಾರಿಯ ಬಲ ಕಣ್ಣು ಅದುರಿತು. ಪಾಂಬುವನ್ನು ವಿಚಾರಿಸದಿದ್ದರೆ ಇದಕ್ಕೆ ಪರಿಹಾರ ಸಿಗಲಾರದು. ಅಧಿಕಾರಿ ಪಿಸಿಗೆ ಈ ಮಾತನ್ನು ತಿಳಿಸಿದ. ಕಿರಣನ ಗಮನ ಪಿಸಿಯತ್ತ ಸರಿಯಿತು. ಪಿಸಿ ಕಿರಣನನ್ನು ನೋಡಿದ. ಕಿರಣ ಸುಳ್ಳು ಹೇಳುತ್ತಿಲ್ಲವೆನ್ನುವುದು ಖಾತ್ರಿಯಾಯಿತು. ಕಿರಣನ ನೋಟದಲ್ಲಿ ಅಳುಕಿರಲಿಲ್ಲ.

ಪಾಂಬುವಿನ ಜೊತೆಗಿದ್ದ ಕಿರಣನನ್ನು ಹೋಲುವ ವ್ಯಕ್ತಿ ಯಾರು? ಇಬ್ಬರು ವ್ಯಕ್ತಿಗಳು ಒಂದೇ ತೆರನಾಗಿರುವುದರಿಂದ ಲಹರಿ ಹಾಗೂ ಮೇನಕಾಳ ನಡುವೆ ಜಗಳ ನಡೆಯುತ್ತಿತ್ತೇ? ಮೇನಕಾ ಲಹರಿಗೆ ಆ ವ್ಯಕ್ತಿಯ ಜೊತೆಗೆ ಓಡಾಡದಂತೆ ಎಚ್ಚರಿಕೆ ನೀಡುತ್ತಿದ್ದಾಳೆ!

ಪಿಸಿಯ ಆಲೋಚನೆ ಸರಿಯಾದ ದಾರಿಯಲ್ಲಿ ಸಾಗುತ್ತಿತ್ತು. ಒಂದಕ್ಕೊಂದು ತಾಳೆ ಹಾಕಿ ಅಧಿಕಾರಿಗೆ ವಿವರಿಸಬೇಕೆಂದುಕೊಂಡ. ಅಧಿಕಾರಿಯ ತನಿಖೆ ಮುಂದುವರೆಯದಂತೆ ಅಡ್ಡಿಪಡಿಸಲು ಇಚ್ಛಿಸದೆ ಎಲ್ಲವನ್ನು ತನ್ನ ಮೆದುಳಿನಲ್ಲಿ ಅಚ್ಚೊತ್ತಿಸಿಕೊಂಡಂತೆ ಇಳಿಸಿದ.

'ಕಿರಣ, ನಿಮ್ಮಿಂದ ತುಂಬಾ ಉಪಕಾರವಾಯಿತು. ನಮ್ಮಿಂದ ಕೆಲಸಕ್ಕೆ ತೊಂದರೆಯಾಯ್ತೇನೋ?'

'ಇಲ್ಲ ಸಾಹೇಬ್ರೆ, ನಾನೂ ಇಲ್ಲಿಗೆ ಕಾಶಮ್ಮನನ್ನು ಸಮಾಧಾನ ಮಾಡೋದಿಕ್ಕೆ ಬಂದಿದ್ದೆ. ಕಾಕುಟ್ಟ ಎಂತಹ ವ್ಯಕ್ತಿ ಅನ್ನೋದು ನಂಗೆ ಬೇಕಿತ್ತು. ಮೇನಕಾ ಹೇಳೋ ಹಾಗೆ ಅವನು ನನ್ನ ಜೀವ ತೆಗೆಯೋದಿಕ್ಕೂ ಹೇಸದ ಮನುಷ್ಯ ಅನ್ಸುತ್ತೆ. ಇಷ್ಟಕ್ಕೂ ಅವನು ಕಾಶಮ್ಮ ದೂರದ ಸಂಬಂಧಿಯಲ್ಲವೆ? ಅವನ ಬಗ್ಗೆ ತಿಳ್ಕೊಂಡು ಆದಷ್ಟು ಎಚ್ಚರಿಕೆಯಿಂದಿರುವುದು ಕ್ಷೇಮ. ಇನ್ನು ಮುಂದೆ ಅದರ ಅವಶ್ಯಕತೆಯೂ ಇಲ್ಲ. ವಿಷಯ ಮೇನಕಾ ತಿಳಿಸಿರೋದ್ರಿಂದ ನಮಗೆ ರಕ್ಷಣೆ ಕೊಡುತ್ತೀರಲ್ಲವೆ?' ಭದ್ರತೆಯ ಮಾತು ಹೊರಡಿಸಿದ.

ಅಧಿಕಾರಿ ಮುಗುಳ್ನಕ್ಕ.

'ಮೇನಕಾಳಿಗಾಗಲಿ ನಿಮಗಾಗಲಿ ಏನೂ ಆಗದ ಹಾಗೆ ನಾನಿದ್ದೀನಿ. ಆದ್ರೂ ನಿಮ್ಮ ಜಾಗ್ರತೆಯಲ್ಲಿ ನೀವಿರೋದು ಒಳ್ಳೆಯದು. ಅನಗತ್ಯ ಒಬ್ಬೊಬ್ಬರೆ ಎಲ್ಲೂ ಓಡಾಡ್ಬೇಡಿ' ಎಚ್ಚರಿಕೆಯ ಮಾತುಗಳನ್ನು ಹೇಳಲು ಮರೆಯಲಿಲ್ಲ ಅಧಿಕಾರಿ.

* * *

ಒಳಗೆ ಕುಳಿತು ತನಿಖೆಯಲ್ಲಿ ತೊಡಗಿದ್ದ ಇನ್ಸ್‌ಪೆಕ್ಟರ್ ರಾಜಧಾನಿ, ಪಿಸಿ ಸಾರಂಗ, ಕಿರಣ ಮೂವರೂ ಕತ್ತು ಹೊರಳಿಸಿ ಹೊರಗೆ ನೋಡುವಂತೆ ವಾಹನದ ಕರ್ಕಶ ಹಾರನ್ ಮೊಳಗಿತು. ಗೇಟಿನ ಎದುರು ನಿಂತಿದ್ದ ಕಾರು ಹೆಡ್ ಲೈಟ್ ಆರಿಸಿತು. ಆಕಾಶವಿನ್ನೂ ಸಂಪೂರ್ಣ ಕಪ್ಪು ಬಣ್ಣಕ್ಕೆ ತಿರುಗಿಲ್ಲ. ಆಗಲೆ ಹೆಡ್ ಲೈಟ್ ಬೆಳಗಿಸಿಕೊಂಡು ಬಂದ ಕಾರಿನ ಒಳಗಿರುವ ವ್ಯಕ್ತಿ ಯಾರು?

ವ್ಯಕ್ತಿ ಕಾರಿನ ಹಾರನ್ ಮೊಳಗಿಸಿ ಆಕ್ರೋಶ ತೋರಿತು. ವ್ಯಕ್ತಿಗೆ ಮನೆಯ ಒಳಗೆ ಬರುವ ಆತುರ. ಮನೆಯಲ್ಲಿರುವವರಿಗೆ ತಿಳಿಯಲೆಂಬಂತೆ ಹೆಡ್ ಲೈಟ್ ಬೆಳಗಿಸಿರಬೇಕು!

ಹೊರಗೆ ವೆರಾಂಡದಲ್ಲಿ ನಿಂತಿದ್ದ ರಾಮಸ್ವಾಮಿ ತಟಕ್ಕನೆ ಓಡು ನಡುಗೆಯಲ್ಲಿ ಗೇಟಿನ ಬಳಿ ಸರಿದ. ಮುಸುಕು ಬೆಳಕಿನಲ್ಲಿ ಕಾರಿನ ಬಣ್ಣ ಸರಿಯಾಗಿ ಗೋಚರಿಸಲಿಲ್ಲ ಒಳಗೆ ಕುಳಿತವರಿಗೆ.

ಅಡುಗೆಯ ಕೆಲಸದಾಳು ಹಜಾರದ ದೀಪ ಬೆಳಗಿಸಿದ ಯಾರದೋ ಮುನ್ಸೂಚನೆಯೆಂಬಂತೆ.

ರಾಮಸ್ವಾಮಿ ಗೇಟು ತೆರೆಯುತ್ತಲೇ ಕಾರು ಕುಲುಕಾಡುತ್ತಾ ಒಳಗೆ ಬಂದು ಪೋರ್ಟಿಕೋದಲ್ಲಿ ನಿಂತಿತು. ಕೆಳಗಿಳಿದ ವ್ಯಕ್ತಿ ಹೆಣ್ಣು! ಪೊಲೀಸ್ ಜೀಪು ಕಾಣುತ್ತಲೇ ಎತ್ತಿಟ್ಟ ಹೆಜ್ಜೆ ತಟಸ್ಥವಾಯಿತು. ಹುಬ್ಬುಗಳು ಬೆಸೆದುಕೊಳ್ಳುವ ಬದಲು ತೆಳು ನಗುವೊಂದು ತುಟಿಗಳಲ್ಲಿ ಅರಳಿತು. ಅವಳ ಸಹಾಯಕ್ಕೆ ರಾಮಸ್ವಾಮಿ ಧಾವಿಸಿದ.

'ರಾಮಸ್ವಾಮಿ, ಒಳಗೆ ಬೇರೆ ಯಾರಿದ್ದಾರೆ?'

ಅವಳ ಮಾತಿಗೆ ರಾಮಸ್ವಾಮಿ ಮುಗುಳ್ನಕ್ಕು ಉತ್ತರಿಸಿದ.

'ಕಿರಣಪ್ಪನೋರು ಸಣ್ಣಮ್ಮನೋರೆ'

ಆಕೆಯ ಕಣ್ಣುಗಳು ಮಿನುಗಿದವು. ತಕ್ಷಣವೇ ತೆರೆದ ಬಾಗಿಲಿನಿಂದ ಒಳಗಡಿಯಿಟ್ಟು ಹಜಾರದಲ್ಲಿ ಕುಳಿತಿದ್ದವರಿಗೆಲ್ಲಾ ಕೈ ಜೋಡಿಸಿದಳು. ಇನ್ಸ್‌ಪೆಕ್ಟರ್ ರಾಜಧಾನಿ ಮಾತ್ರ ಪ್ರತಿಕ್ರಿಯಿಸಿದ.

'ಮೇನಕಾ, ನೀವು ಇಲ್ಲಿರಬಹುದೂಂತ ಹುಡುಕಿಕೊಂಡು ಬಂದೆವು. ನೀವು ಕಂಪ್ಲೇಂಟ್ ಕೊಟ್ಟು ಎಲ್ಲಿಗೆ ಹೋಗಿದ್ರಿ?'

ಮೇನಕಾಳ ತುಟಿಗಳು ಬಿಗಿದವು.

'ಸಿಟಿಯಲ್ಲಿ ಸ್ವಲ್ಪ ಕೆಲಸ ಇತ್ತು. ಅದನ್ನ ಮುಗಿಸಿಕೊಂಡು ಬರೋದಿಕ್ಕೆ ಇಷ್ಟು ಹೊತ್ತಾಯ್ತು, ಕ್ಷಮಿಸಿ'

'ಸರಿ, ನಾವು ನಿಮ್ಮ ಫಾರ್ಮ್ ಹೌಸ್ ನೋಡುವುದಕ್ಕೆ ಕಾತುರರಾಗಿದ್ದೇವೆ' ಅಧಿಕಾರಿಯ ಇಂಗಿತಕ್ಕೆ ಸಾರಂಗನ ಮುಖ ಸಿಂಡರಿಸಿತು. ಹಿಂದೊಮ್ಮೆ ಫಾರ್ಮ್ ಹೌಸ್‌ಗೆ ಹೋಗಿದ್ದನ್ನು ನೆನಪಿಸಿಕೊಂಡ. ಸುಮ್ಮನೆ ಆಲೆಮನೆ ಯವರೆಗೂ ಬೈಕ್‌ನಲ್ಲಿ ಸುತ್ತಾಡಿ ಹಿಂತಿರುಗಿದ್ದಾಗಿದೆ. ಆ ದಿನ ಬಂಗಲೆಗೆ ಬರುವಾಗ ಮೇನಕಾ ಉರಿ ಕಾರಿದಂತೆ ಎಗರಾಡಿದ್ದಳು. ಈಗ ಮತ್ತೊಮ್ಮೆ ಫಾರ್ಮ್ ಹೌಸ್‌ಗೆ!

ಅಲ್ಲೇನಿದೆ ನೋಡೋದಿಕ್ಕೆ, ಅದೂ ಈ ಮುಸುಕು ಮಬ್ಬಿನಲ್ಲಿ...? ಅಸಮಾಧಾನ ವ್ಯಕ್ತಪಡಿಸಿದ ಪಿಸಿ.

'ನೀವು ಕಿರಣಂಗೆ ಹೇಳ್ಗಿದ್ರೆ ಇಷ್ಟರೊಳಗೆ ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಿದ್ದ. ಈ ಹೊತ್ನಲ್ಲಿ ಅಲ್ಲಿ ಏನೂ ಕಾಣ್ಸೋದಿಲ್ಲ'

ನಿರಾಕರಣೆಯಲ್ಲವಾದರೂ ಅವಳ ಮಾತಿನಲ್ಲಿ ಅಸಮಾಧಾನವಿತ್ತು.

'ಕಿರಣನಿಗೆ ಫಾರ್ಮ್ ಹೌಸ್ ಬಗ್ಗೆ ಏನು ಗೊತ್ತಿದೆ? ಅದಕ್ಕೆ ನಾವು ಅವನ ಜೊತೆ ಏನೂ ಕೇಳಿಲ್ಲ' ಇನ್ಸ್‌ಪೆಕ್ಟರ್ ಮಾತಿಗೆ ಸಮ್ಮತಿಸುವಂತೆ ಕಿರಣ ತಲೆಯಲುಗಿಸಿದ.

'ಕಿರಣಂಗೆ ಈ ಮನೆಯ ಮೂಲೆ ಮೂಲೆನೂ ಗೊತ್ತು, ಸಾಹೇಬ್ರೆ'

ಮೇನಕಾಳ ಮಾತಿಗೂ ಕಿರಣ ತಲೆಯಲುಗಿಸಿದ.

'ಸಾಹೇಬ್ರೆ, ನಿಮಗೆ ಫಾರ್ಮ್ ಹೌಸ್ ನೋಡ್ಬೇಕು ತಾನೆ? ನಾನು ಕರೆದು ಕೊಂಡು ಹೋಗಬಲ್ಲೆ. ಆದ್ರೆ ನಿಮ್ಮ ಜೀಪು ಆ ದಾರಿಯಲ್ಲಿ ಹೋಗಲಾರದು. ಬಳಸು ದಾರಿಯಲ್ಲಿ ಸಾಗಿದರೆ ಹತ್ತು ಹದಿನೈದು ನಿಮಿಷದ ದಾರಿ ಅದು. ನೀವು ಬಯಸೋದಾದ್ರೆ ಹೋಗೋಣ. ಇಲ್ಲಾ ಮೇಲಿನ ರಸ್ತೆಯಿಂದ ಸಾಗಿದರೆ ಇನ್ನೂ ಹತ್ತು ನಿಮಿಷ ಹೆಚ್ಚು' ತನಗೆ ತಿಳಿದ ಎರಡು ದಾರಿಗಳನ್ನು ತಿಳಿಸಿದ ಕಿರಣ. ಇನ್ಸ್‌ಪೆಕ್ಟರ್‌ನ ಕಣ್ಣುಗಳಲ್ಲಿ ಆಶ್ಚರ್ಯ ತುಂಬಿತ್ತು. ತಾನು ಬರುವಾಗಲೆಲ್ಲಾ ಕಬ್ಬಿನ ತೋಟದ ದಾರಿಯಿಂದ ಸಾಗಿ ಆಲೆಮನೆಯ ಬಳಿಯಿಂದ ಫಾರ್ಮ್ ಹೌಸ್‌ಗೆ ನಡಿಗೆಯ ದಾರಿಯಲ್ಲಿ ತಲುಪಿದ್ದ ನೆನಪು.

'ಕಿರಣ, ಮೇನಕಾ ಹೇಳಿರೋದ್ರಲ್ಲಿ ಸುಳ್ಳಿಲ್ಲ. ನಿಂಗೆ ಮೇನಕಾ ಮಾತ್ರವಲ್ಲ, ಫಾರ್ಮ್ ಹೌಸ್‌ನ ಮೂಲೆ ಮೂಲೆನೂ ಪರಿಚಯವಿದೆ. ಸರಿ, ಬಳಸು ದಾರಿಯಿಂದ ಕಾಲ್ನಡಿಗೆಯಲ್ಲಿಯೇ ಹೋಗೋಣ' ಇನ್ಸ್‌ಪೆಕ್ಟರ್ ಎದ್ದು ನಿಂತಾಗ ಕಿರಣ ಕೂಡ ಎದ್ದು ನಿಂತ. ಮೇನಕಾಳ ನೋಟ ಕಿರಣನತ್ತ ಇತ್ತು.

'ಮೇನಕಾ, ನೀನೂ ಹೊರಡು' ಅವಳ ನೋಟವನ್ನು ಅರ್ಥೈಸಿಕೊಂಡು ಹೇಳಿದ ಕಿರಣ. ಮೇನಕಾ ನಿರಾಕರಿಸಿದಳು.

'ಸಾಹೇಬ್ರಿಗೆ ಕೆಲವೊಂದು ಮಾಹಿತಿಗಳು ಬೇಕಾಗಬಹುದು. ನೀನೂ ರಾಮಸ್ವಾಮಿಯೂ ಜೊತೆಗೆ ಇದ್ದರೆ ಒಳ್ಳೆಯದು' ಸಲಹೆ ನೀಡಿದ ಕಿರಣ ಮೇನಕಾಳತ್ತ ನೋಡುತ್ತಾ. ಮೇನಕಾ ರಾಮಸ್ವಾಮಿಯನ್ನು ಹೊರಡುವಂತೆ ಸೂಚಿಸಿದಳು.

'ರಾಮಸ್ವಾಮಿ, ನಿನ್ನೆ ದಿನ ಏನಾಯ್ತು ಎಲ್ಲವನ್ನೂ ಹೇಳಿ ಬಿಡು' ಪಿಸು ದನಿಯಲ್ಲಿ ರಾಮಸ್ವಾಮಿಗೆ ಹೇಳಿದಳು.

'ಸರಿ, ಅಮ್ಮೋರೆ ಹೇಳ್ತೀನಿ' ಒಡತಿಯ ಮಾತಿಗೆ ತಲೆಯಲುಗಿಸಿದ.

**(ಸಶೇಷ)**